


ಎಡದಿಂದ ಬಲಕ್ಕೆ:

1. ಆದಾಯ ತೆರಿಗೆಯ ಕಾನೂನುಗಳ ಆಳ ವ್ಯಾಸಂಗ ನಡೆದಿದೆ 4
3 ಆಕಾಶದಲ್ಲಿ ಶುಕ್ರ ಗ್ರಹದ್ದು ಭಾರೀ ಹೊಳಪು 3
4. ಪೊಗರು ಹೆಚ್ಚಾಗಿ ಮೆರೆದಿದ್ದಕ್ಕೆ ಕಟಾವಾಯಿತು ಸಂಬಳ 3
6. ಆ ವಿನಯವಂತನಿಗೆ ತುಂಬ ಇಷ್ಟವಾದದ್ದು ಬೆಣ್ಣೆ 4
7. ಕರ್ಪೂರದಂಥ ವಸ್ತು ; ಬೆಳಕನ್ನು ಹರಿಯಬಿಡುತ್ತದೆ 3
9. ಅನುಮತಿ ಸಿಗುವ ದಿನದ ದೂರ ಬಹಳ ಏನಿಲ್ಲ 3
11. ಎಲ್ಲ ವರ್ತಕರಿಗೂ ವಿತರಣೆಯಾದದ್ದು ಒಂದು ಬೆಳ್ಳನೆಯ ಲೋಹ 3
13. ಕೌಶಲ್ಯಕ್ಕೆ ತಕ್ಕಂತೆ ಆತ ಗಳಿಸಿದ್ದು ಒಂದು ನೂರು 3
15. ಹಸಿರಿನ ರಾಶಿಯ ಮಧ್ಯೆ ಹೇಗೆ ಕಂಡೀತು ಹಳದಿ? 4
17. ಸುಳ್ಳನ್ನೇ ನುಡಿಯುವವರ ಗುಂಪಿನಿಂದ ಹೊರಕ್ಕೆ ಜಾರಿಕೋ 3
18. ಕಲ್ಮಶಗಳೆಲ್ಲ ದೂರವಾದ ಮೇಲೆ ಹೇಗಿದೆ ಊರಿನ ಕ್ಷೇಮ? 3
19. ಕಾರು ಕೊಳ್ಳಲು ಬಂದವನದು ದುರ್ಯೋಧನನ ವಂಶ 4

ಮೇಲಿಂದ ಕೆಳಕ್ಕೆ:

1. ಅನವಶ್ಯ ಆಗುವಂತೆಯೇ ಇಲ್ಲ; ಇದು ನಿತ್ಯದ ಊಟ 3
2. ಪತನದಿಂದ ಉಂಟಾದ ಸಂತಾಪ ಬುಡಮೇಲು 3
3. ಸಮಸ್ಯೆಯನ್ನು ಪರಿಹರಿಸದೆ ಬಂದವರಿಗೆ ಬಿತ್ತು ಏಟು 3
5. ರಸಕವಳವೇನೋ ಸರಿ ; ಅದನ್ನು ಸವಿಯಲು ನಾಲಿಗೆ ಬೇಕಲ್ಲ? 3
7. ಪುರಾಣಾಂತರ್ಗತ ವಿಷಯಗಳಲ್ಲಿ ಆತ ಪರಿಪೂರ್ಣ ವಿದ್ವಾಂಸ 4
8. ಆ ಕಿಂಕರನ ಸ್ಥಿತಿಗತಿ ನೋಡಿದರೆ ಅಯ್ಯೋ ಪಾಪ ಎನಿಸುತ್ತದೆ 4
9. ಇರಿಸಿದ್ದನ್ನೆಲ್ಲ ಅದೃಶ್ಯ ಮಾಡುವ ಈ ಅದ್ಭುತಕ್ಕೆ ಹೋಲಿಕೆಯೇ ಇಲ್ಲ 4
10. ತಾಳ ವಾದ್ಯ ಕಲಿಯುವ ಪ್ರಯತ್ನಕ್ಕೆ ಎಳ್ಳು ನೀರು ಬಿಟ್ಟನೇ? 4
12. ಜವಾನನಾಗಿ ಬಂದವನ ಬೆನ್ನ ಮೇಲೆ ಎಷ್ಟೊಂದು ತೂಕ! 3
14. ಬೆಲ್ಲ ತಯಾರಿಸುವವನ ಜೊತೆಯಲ್ಲಿ ಯಾವುದೀ ಲಯವಾದ್ಯ? 3
15. ಆಕಳನ್ನು ಮುಟ್ಟಲೂ ಆಕೆಗೆ ಭಾರೀ ಹಿಂಜರಿತ 3
16. ಖಾಲಿ ಮನೆಯಲ್ಲಿ ಓಡಾಡುತ್ತಿರುವುದು ಮುಂಗುಸಿ 3

## 04—02—2021 ಉತ್ತರಗಳು

ಎಡದಿಂದ ಬಲಕ್ಕೆ:

1. ಸಾವಧಾನ 3. ಕಲಹ 4. ಕಾಳಗ 6. ಸರಕಾರ7. ಬಳುವಳಿ 8. ಕರಣಿಕ 10. ರಮಾನಾಥ 12. ಚಳವಳಿ 14. ಉಷಃಕಾಲ 16 ಕಠೋರ 17. ಹವಳ 18. ಗರಿಮುರಿ

ಮೇಲಿಂದ ಕೆಳಕ್ಕೆ:

1. ಸಾಹಸ 2. ನಕಾರ 3. ಕಕವಕ 5. ಗಟಾರ 7. ಬಡಿವಾರ 9. ಕರಾವಳಿ 11. ನಾವಿಕ 13. ಕಳವಳ14. ಉರಗ 15. ಲಹರಿ

ಪ್ರಶ್ನಾಂಕಣ

# ಕಡಲ ಹಕ್ಕಿಗಳದೇಕೆ ದಾರುಣ ಸ್ಥಿತಿ?

ಹೆಸರೇ ಸೂಚಿಸುವಂತೆ ಆಹಾರಕ್ಕಾಗಿ ಸಾಗರವನ್ನು ಆಶ್ರಯಿಸಿರುವ ಹಕ್ಕಿಗಳೇ ಕಡಲ ಹಕ್ಕಿಗಳು. ಸಾಗರದಲ್ಲೇ ಈಜುತ್ತ ಅಥವಾ ನೀರಿನ ಸನಿಹದಲ್ಲೇ ಹಾರಾಡುತ್ತ ರೆಕ್ಕೆ ಮಡಿಸಿ ಬಾಣದಂತೆ ನೀರಿಗೆ ಧುಮುಕಿ ಮತ್ಸ್ಯಗಳನ್ನು ಹಿಡಿದು ಸೇವಿಸುವುದು ಮತ್ತು ಕಡಲಿನ ನಡುವಣ ದ್ವೀಪಗಳಲ್ಲಿ, ನಡುಗಡ್ಡೆಗಳಲ್ಲಿ ಗುಂಪುಗೂಡಿ, ಗೂಡುಕಟ್ಟಿ ಸಂತಾನ ವರ್ಧಿಸಿಕೊಳ್ಳುವುದು ಈ ಹಕ್ಕಿಗಳ ಜೀವನ ಕ್ರಮ. ಕಡಲ ಹಕ್ಕಿಗಳಲ್ಲಿ 360 ಪ್ರಭೇದಗಳಿವೆ; ಅವುಗಳ ಒಟ್ಟು ಸಂಖ್ಯೆ 63 ಕೋಟಿಯಷ್ಟಿದೆ.

ಆದರೆ, ವಿಪರ್ಯಾಸ ಏನೆಂದರೆ, ಜಗದಾದ್ಯಂತ ಬಹು ಜನರಿಗೆ ಕಡಲ ಹಕ್ಕಿಗಳ ಪರಿಚಯ ಇಲ್ಲವೇ ಇಲ್ಲ. ಗನ್ನೆಟ್, ಪಫಿನ್, ಪೆಂಗ್ವಿನ್ (ಕ್ರಮವಾಗಿ ಚಿತ್ರ 1, 2 ಮತ್ತು 3), ಕಾರ್ಮೋರಾಂಟ್, ಗಲ್, ಲೂನ್, ಪೆಟ್ರೆಲ್, ಶಿಯರ್ ವಾಟರ್, ಬೂಬಿ, ಗಲಿಮಾಟ್, ಆಲ್ ಬಟ್ರಾಸ್...ಇತ್ಯಾದಿ ಹೆಸರುಗಳು ನಮ್ಮ ಪರಿಚಿತ ಪಕ್ಷಿಗಳ ಪಟ್ಟಿಯಲ್ಲಿ ಇಲ್ಲ. ಮನುಷ್ಯರಿಂದ ದೂರ ಇದ್ದು ಅಜ್ಞಾತವಾಗಿ ಇರುವುದರಿಂದಲೇ ಅವುಗಳ ಬಾಳಿನ ಏಳುಬೀಳುಗಳು, ಸ್ಥಿತಿಗತಿಗಳು ವ್ಯಾಪಕವಾಗಿ ಬಹು ಜನರ ಗಮನಕ್ಕೆ ಬಾರದೆ ನೇರವಾಗಿ ಮತ್ತು ಪರೋಕ್ಷವಾಗಿ ಮನುಷ್ಯರ ಚಟುವಟಿಕೆಗಳಿಂದಲೇ ಈ ಹಕ್ಕಿಗಳು ಸದ್ಯದ ದಾರುಣ ಸ್ಥಿತಿಯನ್ನು ತಲುಪಿವೆ. ಎಷ್ಟೆಂದರೆ, ಇಸವಿ 1970ರಿಂದ ಈವರೆಗಿನ 70 ವರ್ಷಗಳಲ್ಲಿ ಕಡಲ ಹಕ್ಕಿಗಳ ಶೇಕಡ 70 ರಷ್ಟು ಪ್ರಭೇದಗಳು ಅಲ್ಪ ಸಂಖ್ಯೆಗಿಳಿಗೆ ಇಳಿದಿವೆ; 110 ಪ್ರಭೇದಗಳು ಅಳಿದೇ ಹೋಗುವ ಸ್ಥಿತಿ ಮುಟ್ಟಿವೆ! ಏಕೆ ಹೀಗೆ?




ಅದಕ್ಕೆ ಹಲವಾರು ಪ್ರಮುಖ ಕಾರಣಗಳಿವೆ. ಕಡಲ ಹಕ್ಕಿಗಳ ಸಂತಾನಾಭಿವೃದ್ಧಿಯ ನೆಲೆಗಳಾದ ದ್ವೀಪಗಳಲ್ಲಿ ಮನುಷ್ಯರ ಜೊತೆ ಹೋಗಿ ತಲುಪಿರುವ ಇಲಿ, ಮನೆ ಬೆಕ್ಕು ಇತ್ಯಾದಿ 'ಅನ್ಯ ಪ್ರಾಣಿ'ಗಳ ಸಂಖ್ಯೆ ಮಿತಿ ಮೀರಿದೆ. ಕಡಲ ಹಕ್ಕಿಗಳ ಮೊಟ್ಟೆಗಳನ್ನು, ಮರಿಗಳನ್ನು ಇಂತಹ ಧಾಳಿಕೋರರು ಭಾರೀ ಸಂಖ್ಯೆಯಲ್ಲಿ ತಿಂದು ಹಾಕುತ್ತಿವೆ. ಕಡಲಲ್ಲಿ ದೈತ್ಯ 'ತೈಲ ವಾಹಕ ಹಡಗು'ಗಳ ಅವಗಢಗಳಿಂದ ಸಂಭವಿಸುತ್ತಿರುವ ತೈಲ ಸೋರಿಕೆಯ ಪ್ರದೇಶಗಳಲ್ಲಿ ಬೇಟೆಗೆಂದು ಧುಮುಕುವ ಹಕ್ಕಿಗಳು ರೆಕ್ಕೆಗಳಿಗೆ ಮೆತ್ತಿಕೊಳ್ಳುವ ತೈಲದಿಂದಾಗಿ ಮೇಲೇಳಲಾರದೆ, ಹಾರಲಾರದೆ ಪ್ರಾಣ ಕಳೆದುಕೊಳ್ಳುತ್ತಿವೆ. ಮೀನುಗಾರ ಹಡಗುಗಳು ಸಾಗರದಲ್ಲಿ ಹರಡುವ 'ಊರಗಲದ' ಅಗೋಚರ ಬಲೆಗಳಿಗೆ ಅಸಂಖ್ಯ ಕಡಲ ಹಕ್ಕಿಗಳು ಸಿಲುಕಿ ಅಲ್ಲೇ ಮುಳುಗಿ ಸಾಯುತ್ತಿವೆ. ಸಾಗರದಲ್ಲಿ ತೇಲುತ್ತಿರುವ ಅಪಾರ ಸಂಖ್ಯೆಯ ಪ್ಲಾಸ್ಟಿಕ್ ತುಣುಕುಗಳನ್ನು ಆಹಾರವೆಂದೇ ಭಾವಿಸಿ ತಾವೂ ನುಂಗಿ, ಮರಿಗಳಿಗೂ ಗುಟುಕು ನೀಡಿ ಕೂಡ (ಚಿತ್ರ4) ಲಕ್ಷಾಂತರ ಸಂಖ್ಯೆಯ ಸಾಗರ ಹಕ್ಕಿಗಳು ಅಸು ನೀಗುತ್ತಿವೆ. ಪ್ರಸ್ತುತದ 'ವಾಯುಗುಣ ಬದಲಾವಣೆ' ಕಡಲ ಹಕ್ಕಿಗಳ ಬದುಕಿನ ವೇಳಾಪಟ್ಟಿಯನ್ನು, ಜೈವಿಕ ಲಯವನ್ನು ತಳಮಳಕ್ಕೆ ಸಿಲುಕಿಸಿದೆ. ಇಂಥವೆಲ್ಲ ಕಾರಣಗಳಿಂದ ಕಡಲ ಹಕ್ಕಿಗಳು ದಾರುಣ ಸ್ಥಿತಿ ತಲುಪಿವೆ.

■ ಎನ್. ವಾಸುದೇವ್